ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	816
ಸದಸ್ಯರ ಹೆಸರು	:	ಶ್ರೀ ಕೆ.ಟಿ.ಶ್ರೀಕಂಠೇಗೌಡ
ಉತ್ತರಿಸುವ ದಿನಾಂಕ	:	09-03-2021
ಉತ್ತರಿಸುವ ಸಚಿವರು	:	ಸಹಕಾರ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಸಹಕಾರ ಇಲಾಖೆಯಲ್ಲಿ ನಿಯಮ 32 ರಡಿ ವಿವಿಧ ವೃಂದದ ಅಧಿಕಾರಿಗಳಿಗೆ ಪದೋನ್ನತಿಯನ್ನು ನೀಡಬೇಕಾದ್ದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಗಣಿಸುವುದು ಅವಶ್ಯಕವಾಗಿರುತ್ತದೆಯೇ; (ವಿವರ ನೀಡುವುದು)	ಹೌದು. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ, ನಿಯಮ-32 ರಡಿ ಅಧಿಕಾರಿಗಳನ್ನು ಸ್ವತಂತ್ರ ಪ್ರಭಾರದಲ್ಲಿ ಇರಿಸಲು ಅವಕಾಶವಿದ್ದು, ಈ ಅವಕಾಶದನ್ವಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪದೋನ್ನತಿಗೆ ಅರ್ಹರಿರುವ ಅಧಿಕಾರಿ / ನೌಕರರನ್ನು ಪರಿಗಣಿಸುವುದು ಅವಶ್ಯಕವಾಗಿರುತ್ತದೆ.
ಆ)	ಈ ತಹಲ್ ವರೆಗೆ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲಂಘನೆ ಮಾಡಿ ಯಾವುದೇ ಹುದ್ದೆಗೆ ನಿಯಮ 32 ರಡಿಯಲ್ಲಿ ಪದೋನ್ನತಿಯನ್ನು ನೀಡಲಾಗಿದೆಯೇ; (ವಿವರ ನೀಡುವುದು)	ಇಲ್ಲ. ಇಲಾಖೆಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಅಧಿಕಾರಿಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ, ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿದ್ದು, ಇದು ಪದೋನ್ನತಿ ಆಗಿರುವುದಿಲ್ಲ, ಬದಲಿಗೆ ತಾತ್ಕಾಲಿಕ ಕಾರ್ಯ ನಿರ್ವಹಣಾ ವ್ಯವಸ್ಥೆಯಾಗಿರುತ್ತದೆ.
ಇ)	ಇಲಾಖೆಯಲ್ಲಿನ ವಿವಿಧ ವೃಂದದ ಹುದ್ದೆಗಳಿಗೆ ನಿಯಮ-32 ರಡಿ ಪದೋನ್ನತಿ ನೀಡಿದ್ದು, ನಂತರ ಮುಂದಿನ ಹುದ್ದೆಗೆ ಪದೋನ್ನತಿ ನೀಡುವಾಗ ನಿಯಮ-32 ರಡಿ ಕರ್ತವ್ಯ ನಿರ್ವಹಿಸಿದ ಅವಧಿಯನ್ನು ಪದೋನ್ನತಿಗೆ ಅರ್ಹ ಸೇವಾ ಅವಧಿಯೆಂದು ಪರಿಗಣಿಸಲಾಗುತ್ತಿದೆಯೇ? (ವಿವರ ನೀಡುವುದು)	ಇಲ್ಲ.
ಈ)	ನಿಯಮ-32 ರಡಿಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯನ್ನು ಮುಂದಿನ ಹುದ್ದೆಯ ಪದೋನ್ನತಿಗೆ ಅರ್ಹ ಸೇವಾ ಅವಧಿಯೆಂದು ಪರಿಗಣಿಸಬೇಕೆಂದು ಇಲಾಖೆಯಲ್ಲಿ ರಚಿಸಿಕೊಂಡಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿದೆಯೇ; (ವಿವರ ನೀಡುವುದು)	ಇಲ್ಲ.

ಉ)	ಸಿ.ಡಿ.ಒ ಗಳ ಜೇಷ್ಠತಾ ಪಟ್ಟಿ ಉಲ್ಲಂಘನೆ ಮಾಡಿ ಎಂ.ಆರ್.ಸಿ.ಎಸ್ ಹುದ್ದೆಗೆ ಪದೋನ್ನತಿ ನೀಡಿರುವ ಕುರಿತು ಸರ್ಕಾರದ ಹಂತದಲ್ಲಿ ನಿರ್ವಹಿಸಿರುವ ಕಡತ' ಸಂಖ್ಯೆ: ಸಇ 336 ಎಸಸೇ 2016 ಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಪದೋನ್ನತಿಯಲ್ಲಿ ಅನ್ಯಾಯವಾಗಿರುವ ಅಧಿಕಾರಿಗಳಿಗೆ ನ್ಯಾಯ ಒದಗಿಸಿ ಎಂ.ಆರ್.ಸಿ.ಎಸ್ ಹುದ್ದೆಗೆ ನಿಯಮ-32 ರಡಿ ಪದೋನ್ನತಿ ನೀಡಿರುವುದಿಲ್ಲವೇ (ಪೂರ್ಣ ವಿವರ ನೀಡುವುದು)	ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪಾಲಿಸಿ ಪದೋನ್ನತಿ ನೀಡಲಾಗುತ್ತಿದೆ. ಸಹಕಾರ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಉಲ್ಲಂಘನೆ ಮಾಡಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಸ್ಥಾನವನ್ನು ಪದೋನ್ನತಿ ನೀಡಿರುವುದಿಲ್ಲ. ಇಲಾಖೆಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಅಧಿಕಾರಿಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ, ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿದ್ದು, ಇದು ಪದೋನ್ನತಿಯಾಗಿರುವುದಿಲ್ಲ, ಬದಲಿಗೆ ತಾತ್ಕಾಲಿಕ ವ್ಯವಸ್ಥೆಯಾಗಿರುತ್ತದೆ. ಸಹಕಾರ ಅಭಿವೃದ್ಧಿ ಅಧಿಕಾರಿ ವೃಂದದಿಂದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವೃಂದಕ್ಕೆ ಸ್ಥಾನವನ್ನು ಪದೋನ್ನತಿ/ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ 18 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವ ಅಧಿಕಾರಿಗಳನ್ನು ಪರಿಗಣಿಸಬೇಕಾಗಿದ್ದು ಅದರಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ, ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದೆ.

ಸಂಖ್ಯೆ: ಸಿಒ 51 ಇಸಿಎ 2021

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು